**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ಉಪವಿಭಾಗ, 7ನೇ ಮಹಡಿ, ಪಿ.ಯು.ಕಟ್ಟಡ, ಎಂ.ಜಿ.ರಸ್ತೆ, ಮೇಯೊಹಾಲ್, ಬಿ.ಬಿ.ಎಂ.ಪಿ. ಬೆಂಗಳೂರು–560001**

ಸಂಖ್ಯೆ : ಸ.ಕಾ.ಅ/ಶಾಂ.ಉವಿ/ಪಿಆರ್/ /2022–23 ದಿನಾಂಕ :17–09–2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ : 116 ನೀಲಸಂದ್ರದ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಕಛೇರಿ ಬೆಂಗಳೂರು. ದಿನಾಂಕ:17–09–2022 ರಂದು ಮಧ್ಯಾಹ್ನ 12:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು

ಸಭೆಗೆ ಹಾಜರಿದ್ದ ಸಾರ್ವಜನಿಕರು ಹಾಗೂ ಅಧಿಕಾರಿಗಳು

| ಕ್ರ.ಸಂ | ಸದಸ್ಯರ ಹೆಸರುಗಳು |
|---|---|
| 1 | ಶ್ರೀ ಸಂಗಮಿತ್ರ ನೊಡಲ್ ಅಧಿಕಾರಿ (ನೀಲಸಂದ್ರ–116) ಹಾಗೂ ಉಪ ಆರೋಗ್ಯ ಅಧಿಕಾರಿಗಳು (ಪೂರ್ವ ವಲಯ) |
| 2 | ಶ್ರೀ ಹರ್ಷ ಎಸ್. ಕಿರಿಯ ಅಭಿಯಂತರರು (ಕಾರ್ಯದರ್ಶಿ) |
| 3 | ಶ್ರೀ ನೀಲಾಂಜನಪ್ಪಾ, ಕಿರಿಯ ಆರೋಗ್ಯ ಪರಿವೀಕ್ಷಕರ, (ನೀಲಸಂದ್ರ) |
| 4 | ಶ್ರೀ ಕೆ.ಕುಮಾರ್, ಕಂದಾಯ ಪರಿವೀಕ್ಷಕರು (ಶಾಂತಿನಗರ) |
| 5 | ಶ್ರೀ ನವೀನ್ ಕುಮಾರ್, ಮಾಷಲ್, |
| 6 | ಶ್ರೀ ಕರೇಗೌಡ, ಬಿಡಬ್ಲ್ಯೂಎಸ್ಎಸ್ಬಿ |
| 7 | ಶ್ರೀ ಮಂಜು.ಆರ್, ಸಾರ್ವಜನಿಕರು (ನೀಲಸಂದ್ರ) |
| 8 | ಶ್ರೀ ಸೈಯದ್ ಇದ್ರೀಸ್, ಸಾರ್ವಜನಿಕರು (ನೀಲಸಂದ್ರ) |
| 9 | ಶ್ರೀ ಮುರುಗನ್, ಸಾರ್ವಜನಿಕರು (ನೀಲಸಂದ್ರ) |
| 10 | ಶ್ರೀ ಮಣಿ, ಸಾರ್ವಜನಿಕರು (ನೀಲಸಂದ್ರ) |
| 11 | ಶ್ರೀ ಯೇಸು, ಸಾರ್ವಜನಿಕರು (ನೀಲಸಂದ್ರ) |

ಶ್ರೀ.ಸಂಗಮಿತ್ರ ನೊಡಲ್ ಅಧಿಕಾರಿ (ನೀಲಸಂದ್ರ–116) ರವರ ಅಧ್ಯಕ್ಷತೆಯಲ್ಲಿ ಹಾಗೂ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸುತ್ತಾ ಮುಖ್ಯ ವಿಷಯದ ಬಗ್ಗೆ ಚರ್ಚಿಸಲು ತಿಳಿಸಿದರು.

| ಕ್ರ.ಸಂ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) | |
| 1 | ಕಾಮಗಾರಿ ಇಲಾಖೆ (Engineering Department) | |
| | ➧ ಶ್ರೀ.ಮಂಜು.ವಿ.ಆರ್.ಸಾರ್ವಜನಿಕ:–ಎಲ್.ಆರ್ ನಗರದ 25ನೇ ಅಡ್ಡರಸ್ತೆಯ ಚರಂಡಿಗಳಲ್ಲಿನ ಹೂಳನ್ನು ತೆಗೆಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು.<br>➧ ಸಾರ್ವಜನಿಕರು (ನೀಲಸಂದ್ರ) ರವರು:-ಎಲ್.ಆರ್ ನಗರದ 5ನೇ ಅಡ್ಡರಸ್ತೆ, ಅಂಬೇಡ್ಕರ್ ನಗರ ಈ ರಸ್ತೆಗಳಲ್ಲಿ ಬರುವ ಗುಂಡಿಯನ್ನು ಮುಚ್ಚುವಂತೆ ಕೋರಿದರು. | ಸಹಾಯಕ ಅಭಿಯಂತರರು, ನೀಲಸಂದ್ರ |

Scanned by Scanner Go

| | | |
|---|---|---|
| 2 | ವಿದ್ಯುತ್ ಇಲಾಖೆ (ELECTRICAL DEPARTMENT) | |
| | ➕ಸಾರ್ವಜನಿಕರು (ನೀಲಸಂದ್ರ) ರವರು:-ಎಲ್.ಆರ್ ನಗರ ಅಡರಸ್ತೆಗಳಲ್ಲಿ ಬೆಸ್ಕಾಂ ಮೀಟರ್‌ಗಳನ್ನು ತೆರವು ಗೊಳಿಸಲು ಯಾವದೇ ಮಾಹಿತಿ ತಿಳಿಸದೇ ಮೀಟರ್‌ಗಳನ್ನು ತೆರವುಗೊಳಿಸಿದ್ದು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿದರು.<br>➕ಸಾರ್ವಜನಿಕರು (ನೀಲಸಂದ್ರ) ರವರು:-ಎಲ್ ಆರ್ ನಗರ 15ನೇ ಅಡ್ಡರಸ್ತೆ ಬಳಿ ಬೀದಿ ದೀಪದ ಕಂಬವನ್ನು ಅಳವಡಿಸುವಂತೆ ಕೋರಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಇಲಾಖೆ |
| 3 | ಅರಣ್ಯ ಇಲಾಖೆ | |
| | ➕ಶ್ರೀ.ಯೇಸು, ಸಾರ್ವಜನಿಕರು (ನೀಲಸಂದ್ರ) ರವರು:-ಸದರಿ ವಾರ್ಡ್‌ನಲ್ಲಿ ಬರುವ ಐಪಿಪಿ ಆಸ್ಪತ್ರೆ ಬಳಿಯ ರಸ್ತೆಯ ಅಡಚಣೆಯ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ಕೋರಿದರು. | Forest |
| 4 | ಘನತ್ಯಾಜ್ಯ ನಿರ್ವಹಣೆ ಶಾಂತಿನಗರ (SWM) | |
| | ➕ಸಾರ್ವಜನಿಕರು (ನೀಲಸಂದ್ರ) ರವರು:- ವಾರ್ಡ್ ವ್ಯಾಪ್ತಿಯ ಬೃಹತ್ ಮಳೆ ನೀರು ಗಾಲುವೆ ಬಳಿ ಆರ್.ಎಫ್.ಐ.ಡಿ ಮತ್ತು ಜಿ.ಪಿ.ಎಸ್ ಆಳವಡಿಸುವ ಕಾಮುಗಾರಿಯನ್ನು ಕೈಗೊಂಡಿದ್ದು, ಸದರಿ ಕಾಮುಗಾರಿಯನ್ನು ನಿಲ್ಲಿಸಿರುವುದರಿಂದ ಈ ಕಾಮುಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಕೋರಿದರು.<br>➕ಸಾರ್ವಜನಿಕರು (ನೀಲಸಂದ್ರ) ರವರು:- ಆನೇಪಾಳ್ಯ ಮತ್ತು ಅಂಬೇಡ್ಕರ್ ನಗರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ Suvidha Cabin ಅನ್ನು ಒದಗಿಸಿಕೊಡುವಂತೆ ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (SWM) |
| 5 | ಆರೋಗ್ಯ ಇಲಾಖೆ (MOH) | |
| | ➕ಸಾರ್ವಜನಿಕರು (ನೀಲಸಂದ್ರ) ರವರು:- ವಾರ್ಡ್ ವ್ಯಾಪ್ತಿಯಲ್ಲಿ ಐಪಿಪಿ ಆಸ್ಪತ್ರೆಗೆ ವಿತರಣೆ ಯಾಗಿರುವ ವ್ಯಾಪಾರ ಪರವಾನಗಿ ಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಗೋಡೆಗೆ ಅಂಟಿಸಲು ಕೋರಿದರು. | ಆರೋಗ್ಯ ವೈದ್ಯಾಧಿಕಾರಿ (MOH) |
| 6 | ಬೃಹತ್ ನೀರುಗಾಲುವೆ (SWD DEPARTMENT) | |
| | ಸಾರ್ವಜನಿಕರು (ನೀಲಸಂದ್ರ) ರವರು:- ಎಲ್.ಆರ್ ನಗರ ಪಂಪ್‌ಹೌಸ್ ಬಳಿ ಒಳಚರಂಡಿಯಲ್ಲಿ ಹೂಳನ್ನು ತೆರವುಗೊಳಿಸಲ ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) |

ಅಂತಿಮವಾಗಿ ಅಧ್ಯಕ್ಷಕರು ಮಾತನಾಡುತ್ತಾ ಮೇಲೆ ತಿಳಿಸಿರುವಂತೆ ಎಲ್ಲಾ ಅಧಿಕಾರಿಗಳು ಕೆಲಸ ನಿರ್ವಹಿಸಲು ಕೋರುತ್ತಾ, ಮುಂದಿನ ಸಭೇಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು

Scanned by Scanner Go

...ುತಿಯ ಸಾರ್ವಜನಿಕರು ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sangeetha

| | |
|---|---|
| ಕಾರ್ಯದರ್ಶಿಗಳು | ಅಧ್ಯಕ್ಷರು ಮತ್ತು |
| ಸಹಾಯಕ ಅಭಿಯಂತರರು | ನೋಡಲ್ ಅಧಿಕಾರಿ |
| ವಾರ್ಡ್ –116 ನೀಲಸಂದ್ರ | ವಾರ್ಡ್ –116 ನೀಲಸಂದ್ರ |

ಪ್ರತಿಗಳನ್ನು:-

1) ಮಾನ್ಯ ಮುಖ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಮುಖ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2) ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ಪೂರ್ವ ವಲಯವರವ ಅವಗಾಹನೆಗಾಗಿ ಸಲ್ಲಿಸಿದೆ.
4) ವಲಯ ಆಯುಕ್ತರು, ಪೂರ್ವ ವಲಯವರವ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಅವಗಾಹನೆಗೆ ಸಲ್ಲಿಸಿದೆ.
7) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಹಾಗೂ ಎಲ್ಲಾ ಸಮಿತಿ ಸದಸ್ಯರಿಗೆ ಸಲ್ಲಿಸಿದೆ.
8) ಕಛೇರಿಯ ಕಡತಕ್ಕೆ.

Scanned by Scanner Go